ಇಂದು ದಿನಾಂಕಃ 22.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ 4 ರವರ ಪರ ಶ್ರೀ ಎಸ್ ಪಿ ಕೆ ವಕೀಲರಿಂದಃ

ದಾವಾ ಆಸ್ತಿಗಳಲ್ಲಿ ನನಗೆ ಎಷ್ಟು ಹಿಸ್ಸಾದ ಹಕ್ಕು ಇದೆಯೋ ಪ್ರತಿವಾದಿ 4 ರವರಿಗೆ ಅಷ್ಟೇ ಹಿಸ್ಸೇದ ಹಕ್ಕು ಇದೆ ಎಂದರೆ ಸರಿ.

**ಪಾಟೀ ಸವಾಲುಃ** ಪ್ರತಿವಾದಿ 2, 6 ರಿಂದ 9 ರವರ ಪರ ಶ್ರೀ ವೈ ಹೆಚ್ ಕೆ ವಕೀಲರಿಂದಃ

2, 6 ರಿಂದ 9 ನೇ ಪ್ರತಿವಾದಿಯರು ಸುಮಾರು 25 ರಿಂದ 30 ವರ್ಷಗಳಿಂದ ಹುಬ್ಬಳ್ಳಿಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. 3 ಮತ್ತು 4 ನೇ ಪ್ರತಿವಾದಿಯರು ಹಂಸಬಾವಿಯಲ್ಲಿ ಪ್ರತ್ಯೇಕವಾಗಿ ವಾಸವಾಗಿರುತ್ತಾರೆ ಎಂದರೆ ಸರಿ. ಆ ರೀತಿ 5-6 ವರ್ಷಗಳಿಂದ ಮಾತ್ರ ಬೇರೆಯಾಗಿರುತ್ತಾರೆ. ದಾವಾ ಶೆಡ್ಯೂಲ್-1 ಮತ್ತು 2 ನೇ ಆಸ್ತಿಗಳಲ್ಲಿ 2 ನೇ ಪ್ರತಿವಾದಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ಉಳಿದ ಆಸ್ತಿಗಳಲ್ಲಿ 3 ಮತ್ತು 4 ನೇ ಪ್ರತಿವಾದಿಯರು ಪ್ರತ್ಯೇಕವಾಗಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ನಮ್ಮ ಕುಟುಂಬದಲ್ಲಿ 1987 ರಲ್ಲಿ ಆದಂತಹ ವಿಭಾಗದಂತೆ ಈಗಲೂ ಎಲ್ಲರೂ ಪ್ರತ್ಯೇಕವಾಗಿ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ವಿಬಾಗ ಕಾನೂನು ಪ್ರಕಾರವಾಗಿ ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಪ್ರಧಾನ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.